**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆ ಇಲಾಖೆ**

**2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಅಡಿ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

ವಿಷಯ: 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ 'ಎರಡು ಚಕ್ರಗಳ ಅಟ್ಯಾಚ್‌ಮೆಂಟನ್ನು ಹೊಂದಿಸಿರುವ ಸ್ಕೂಟರ್' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ. ಶ್ರೀ ಮಹಾವೀರ್ ಮೋಟಾರ್ಸ್, ಬೆಂಗಳೂರು, ಇವರ ದಿನಾಂಕ: 29-05-2014ರ ಅರ್ಜಿ. (ಟಿನ್: 29450219227)

**

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮಡಿಯಲ್ಲಿ ನೋಂದಣಿದಾರರಾದ ಮೆ. ಶ್ರೀ ಮಹಾವೀರ್ ಮೋಟಾರ್ಸ್, ನಂ.8/2, ಎಮ್.ವಿ.ಟವರ್, ಬನ್ನೇರಘಟ್ಟ ರಸ್ತೆ, ಆಶ್ರಮ ಬಸ್ ಸ್ಟಾಪ್ ಮತ್ತು ಸಾಗರ್ ಹಾಸ್ಪಿಟಲ್ ಹತ್ತಿರ, ಬೆಂಗಳೂರು-560029 ಇವರು ಮೇಲ್ಕಂಡ ಅರ್ಜಿಯಲ್ಲಿ 'ಎರಡು ಚಕ್ರಗಳ ಅಟ್ಯಾಚ್‌ಮೆಂಟನ್ನು ಹೊಂದಿಸಿರುವ ಸ್ಕೂಟರ್' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಒಳಪಡುವ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ.

ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3. ಈ ಹಿನ್ನೆಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**ಸ್ಪಷ್ಟೀಕರಣ ಆದೇಶ ಸಂಖ್ಯೆ:ಸಿಎಲ್‌ಆರ್/ಸಿಆರ್.42/2014-15, ದಿ. 10-07-2014**

'ಎರಡು ಚಕ್ರಗಳ ಅಟ್ಯಾಚ್‌ಮೆಂಟನ್ನು ಹೊಂದಿಸಿರುವ ಸ್ಕೂಟರ್' (Scooter with two wheeler attachment) ಅನುಸೂಚಿತವಲ್ಲದ ಸರಕಾಗಿದ್ದು, 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 4(1)(ಬಿ)(iii)ರಂತೆ ದಿನಾಂಕ:01.08.2012ರಿಂದ ಶೇಕಡಾ 14.5ರಷ್ಟು ತೆರಿಗೆಗೊಳಪಡುತ್ತದೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

(ಅಜಯ್ ಸೇಠ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು

**ವಾಣಿಜ್ಯ ತೆರಿಗೆಗಳ ಆಯುಕ್ತರು**
**ಕರ್ನಾಟಕ, ಬೆಂಗಳೂರು**